# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್–ಸಂಖ್ಯೆ 129ರಲ್ಲಿ ದಿನಾಂಕ: 18.06.2022ರಂದು ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ:18.06.2022ರಂದು ವಾರ್ಡ್ ಸಂಖ್ಯೆ 129ರ ಜೂನ್ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ129ರ ನವೀಕರಣಗೊಳ್ಳುತ್ತಿರುವ ವಾರ್ಡ್ ಕಛೇರಿಯಲ್ಲಿನ ಹಾಜರಿದ್ದ ಎಲ್ಲಾ ಸ್ಥಳೀಯ ನಿವಾಸಿಗಳೊಂದಿಗೆ ನಡೆಸಲಾಯಿತು ಹಾಗೂ ಈ ಕೆಳಕಂಡಂತೆ ಸದಸ್ಯರು/ಸಾರ್ವಜನಿಕರು ಭಾಗವಹಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಅದಿಕಾರಿಗಳು:

1. ಶ್ರೀ. ಜೆ. ವಿಶ್ವನಾಥ್, ಅಧೀಕ್ಷಕ ಅಭಿಯಂತರರು(ರಾರಾನಗರ ವಲಯ) ಹಾಗೂ ವಾರ್ಡ್129 ನೋಡಲ್ ಅಧಿಕಾರಿಗಳು
2. ಶ್ರೀ. ಜಯ್ ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು
3. ಶ್ರೀ. ವಿಜಯ್ ಕಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ. ಮೋಹನ್ ಸಹಾಯಕ ಅಭಿಯಂತರರು ಬೆಸ್ಕಾಂ
5. ಶ್ರೀ. ಚಂದ್ರಕಾಂತ್ ಕಿರಿಯ ಅಭಿಯಂತರರು ಬೆಸ್ಕಾಂ
6. ಶ್ರೀ. ಭರತ್ ಸಹಾಯಕ ಅಭಿಯಂತರರು ಬಿ.ಬಿ.ಎಂ.ಪಿ

ಸಭೆಯಲ್ಲಿ ಹಾಜರಿದ್ದ ಸ್ಥಳೀಯ ನಿವಾಸಿಗಳು:

1. ಶ್ರೀ. ರಾಮಣ್ಣ ತಿಮ್ಮಯ್ಯ ಎನ್.ಜಿ.ಇ.ಎಫ್ ಬಡಾವಣೆಯ ನಿವಾಸಿಗಳು
2. ಶ್ರೀ. ರಾಮಚಂದ್ರ ಮತ್ತು ಎಸ್.ಕೆ.ಭಟ್ 14ನೇ ಬ್ಲಾಕ್, ಎನ್.ಜಿ.ಇ.ಎಫ್ ಬಡಾವಣೆ, ನಾಗರಭಾವಿ ನಿವಾಸಿಗಳು
3. ಶ್ರೀ. ಶೋಭಾ ಭಟ್ ಆರೋಗ್ಯ ಬಡಾವಣೆಯ ನಿವಾಸಿ
4. ದತ್ತಾ ಸರಫ್ ನೃಪತುಂಗ ಬಡಾವಣೆಯ ನಿವಾಸಿ
5. ಹನುಮಂತಯ್ಯ ಸರ್ಕಾರಿ ಮುದ್ರಾಣಾಲಯ ಬಡಾವಣೆಯ ನಿವಾಸಿಗಳು

ಹಾಗೂ ಹಾಜರಿದ್ದ ವಾರ್ಡ್ ನ ನಿವಾಸಿಗಳು, 11 ಪುರುಷರು, 1 ಮಹಿಳೆಯರು.

ಸದರಿ ವಾರ್ಡ್ ಸಮಿತಿ ಸಭೆಯನ್ನು ಹಾಜರಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದಂತೆ ಹಾಜರಿದ್ದ ನಿವಾಸಿಗಳು ಈ ಕೆಳಕಂಡಂತೆ ದೂರುಗಳನ್ನು ವ್ಯಕ್ತಪಡಿಸಿ ತುರ್ತಾಗಿ ಸರಿಪಡಿಸಲು ಸಭೆಯಲ್ಲಿ ಕೋರಿರುತ್ತಾರೆ.

- ಎಮ್.ಪಿ.ಎಮ್ ಬಡಾವಣೆಯ 2ನೇಯ ಮುಖ್ಯ ರಸ್ತೆಯಲ್ಲಿ ಭಾರಿ ವಾಹನಗಳ ಓಡಾಟ ತಡೆಗಟ್ಟಲು ಬ್ಯಾರಿಕೇಡ್ ಅಳವಡಿಸಲು ಕೋರಿರುತ್ತಾರೆ.
- ನಾಗರಭಾವಿ ಮುಖ್ಯ ರಸ್ತೆಯಲ್ಲಿನ ಫುಟ್ ಪಾತ್ ಒತ್ತುವರಿಯನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಎಮ್.ಪಿ.ಎಮ್ ಬಡಾವಣೆಯಲ್ಲಿನ ಬಿ.ಬಿ.ಎಮ್.ಪಿ ಗ್ರೌಂಡ್, ಶಾಲೆ ಮತ್ತು 60 ಅಡಿ ಮುಖ್ಯ ರಸ್ತೆಯಲ್ಲಿ ಅಕ್ರಮವಾಗಿ ಮಾಡುತ್ತಿರುವ ಪಾರ್ಕಿಂಗ್ ಅನ್ನು ತಡೆಗಟ್ಟಲು ಕೋರಿರುತ್ತಾರೆ.
- ಎಮ್.ಪಿ.ಎಮ್ ಬಡಾವಣೆಯಲ್ಲಿನ ವಾರ್ಡ್ ಕಚೇರಿಯ ಹಿಂಭಾಗದಲ್ಲಿರುವ ಪಾರ್ಕ್ ನಲ್ಲಿ ಅಕ್ರಮವಾಗಿ ಮಾಡುತ್ತಿರುವ ಪಾರ್ಕಿಂಗ್ ಅನ್ನು ತಡೆಗಟ್ಟಲು ಕೋರಿರುತ್ತಾರೆ.
- ಎಮ್.ಪಿ.ಎಮ್ ಬಡಾವಣೆಯಲ್ಲಿನ ಫುಟ್ ಪಾತ್ ಒತ್ತುವರಿ ಮತ್ತು ಗಾರ್ಬೇಜ್ ಡಂಪಿಂಗ್ ಅನ್ನು ತಡೆಗಟ್ಟಲು ಕೋರಿರುತ್ತಾರೆ.
- ಅನ್ನಪೂರ್ಣೇಶ್ವರಿ ಬಡಾವಣೆಯ 15ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆಯಲ್ಲಿರುವ ಕಲ್ವರ್ಟ್ ನ ಚಪ್ಪಡಿಕಲ್ಲು ಹಾಳಾಗಿದ್ದು ಸರಿಪಡಿಸಲು ಕೋರಿರುತ್ತಾರೆ.

- ಆರೋಗ್ಯ ಬಡಾವಣೆಯ 5ನೇ ಮುಖ್ಯರಸ್ತೆಯಲ್ಲಿರುವ ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆಗೆಯಲು ಮತ್ತು ಗಾರ್ಬೇಜ್ ಡಂಪಿಂಗ್ ಅನ್ನು ತಡೆಗಟ್ಟಲು ಕೋರಿರುತ್ತಾರೆ.
- ಅನ್ನಪೂರ್ಣೇಶ್ವರಿ ಬಡಾವಣೆಯ 2ನೇ ಮುಖ್ಯರಸ್ತೆಯಲ್ಲಿರುವ ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆಗೆಯಲು ಮತ್ತು ಗಾರ್ಬೇಜ್ ಡಂಪಿಂಗ್ ಅನ್ನು ತಡೆಗಟ್ಟಲು ಕೋರಿರುತ್ತಾರೆ.
- ನಾಗರಭಾವಿಯ 14ನೇ ಬ್ಲಾಕ್‌ನಲ್ಲಿರುವ ಚರಂಡಿಯ ಚಪ್ಪಡಿಕಲ್ಲು ಹಾಳಾಗಿದ್ದು ಸರಿಪಡಿಸಲು ಕೋರಿರುತ್ತಾರೆ.

**ಕ್ರಮ: ಸ.ಕಾ.ನಿ.ಅ (ರಾರಾ ನಗರ), ಕಿರಿಯ ಅಭಿಯಂತರರು ಶ್ರೀ. ವೆಂಕಟೇಶ.ಸಿ ಮತ್ತು ಸಹಾಯಕ ಅಭಿಯಂತರರು ಶ್ರೀ. ಸಿದ್ಧರಾಮಯ್ಯ**

ಬೆಸ್ಕಾಂ ವಿಭಾಗಕ್ಕೆ ಸಂಬಂಧಿಸಿದಂತೆ ಹಾಜರಿದ್ದ ನಿವಾಸಿಗಳು ಈ ಕೆಳಕಂಡಂತೆ ದೂರುಗಳನ್ನು ವ್ಯಕ್ತಪಡಿಸಿ ತುರ್ತಾಗಿ ಸರಿಪಡಿಸಲು ಸಭೆಯಲ್ಲಿ ಕೋರಿರುತ್ತಾರೆ.

- NGEF ಬಡಾವಣೆಯಲ್ಲಿನ ವಿದ್ಯುತ್ ಪೆಟ್ಟಿಗೆಗೆ ಫೆನ್ಸಿಂಗ್ ಅಳವಡಿಸಲು ಕೋರಿರುತ್ತಾರೆ.
- ಎಮ್.ಪಿ.ಎಮ್ ಬಡಾವಣೆಯಲ್ಲಿ 3 ವಿದ್ಯುತ್ ಕಂಬಗಳನ್ನು ಮತ್ತು ಬೀದಿದೀಪಗಳನ್ನು ಅಳವಡಿಸಲು ಕೋರಿರುತ್ತಾರೆ.
- ಆರೋಗ್ಯ ಬಡಾವಣೆಯಲ್ಲಿ ಬೆಸ್ಕಾಂ ನವರು UG ಕೇಬಲ್ ಗಳನ್ನು ಅಳವಡಿಸಲು ರಸ್ತೆಯನ್ನು ಅಗೆದು ಸರಿಯಾಗಿ ಮುಚ್ಚದೆ ಇರುವುದನ್ನು ಸರಿಪಡಿಸಲು ಕೋರಿರುತ್ತಾರೆ.
- ಸರ್ಕಾರಿ ಮುದ್ರಾಣಾಲಯ ಬಡಾವಣೆಯಲ್ಲಿನ ಹಳೆಯ ವಿದ್ಯುತ್ ಕಂಬ ತೆರವುಗೊಳಿಸಲು ಕೋರಿರುತ್ತಾರೆ.
- ಸರ್ಕಾರಿ ಮುದ್ರಾಣಾಲಯ ಬಡಾವಣೆಯಲ್ಲಿನ ಬಸ್ ನಿಲ್ದಾಣದ ಹತ್ತಿರ ಇರುವ 2 ವಿದ್ಯುತ್ ಕಂಬಗಳಲ್ಲಿ ಒಂದನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಆರೋಗ್ಯ ಬಡಾವಣೆಯಲ್ಲಿನ ರಸ್ತೆಯಲ್ಲಿರುವ ಬೀದಿದೀಪಗಳಿಗೆ ಲೋಡ್ ಸ್ಪ್ಲಿಟಿಂಗ್ ಅನ್ನು ಮಾಡಲು ಕೋರಿರುತ್ತಾರೆ.
- ಆರೋಗ್ಯ ಬಡಾವಣೆಯ 3ನೇ ಬಿ. ರಸ್ತೆಯಲ್ಲಿರುವ ಬೀದಿದೀಪಗಳ ಸ್ವಿಚ್ಗಳನ್ನು ಬದಲಾಯಿಸಲು ಕೋರಿರುತ್ತಾರೆ.
- NGEF ಬಡಾವಣೆಯ 11ನೇ ಬ್ಲಾಕ್ ನಲ್ಲಿ 2 ವಿದ್ಯುತ್ ಕಂಬಗಳನ್ನು ಮತ್ತು ಬೀದಿದೀಪಗಳನ್ನು ಅಳವಡಿಸಲು ಕೋರಿರುತ್ತಾರೆ.

**ಕ್ರಮ: ಸಹಾಯಕ ಅಭಿಯಂತರರು ಶ್ರೀ. ಮೋಹನ್**

ಘನ ತ್ಯಾಜ್ಯ ವಿಭಾಗಕ್ಕೆ ಸಂಬಂದಿಸಿದಂತೆ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಮೇಲೆ ನಿಗಾವಹಿಸಿ ಗುರುತಿಸಿ ಪಟ್ಟಿಮಾಡುವಂತೆ ಈ ಹಿಂದಿನ ಸಭೆಯಲ್ಲಿ ಸೂಚಿಸಿದಂತೆ ತತ್ಸಂಬಂದ ಹಾಜರಿದ್ದ ಕಿ.ಆ.ಪ ಸದರಿ ಪ್ರಕ್ರಿಯೆ ಜಾರಿಯಲ್ಲಿದ್ದು ಮುಂದಿನ ಸಭೆಯಲ್ಲಿ ಸಲ್ಲಿಸುವುದಾಗಿ ಸಭೆಯಲ್ಲಿ ವ್ಯಕ್ತಪಡಿಸಿರುತ್ತಾರೆ. ಮುಂದುವರೆದಂತೆ ಪ್ರತಿ ಮೇಲ್ವಿಚಾರಕರು ಅವರ ವ್ಯಾಪ್ತಿಗೆ ಬರುವ ಒಂದು ಬ್ಲಾಕ್ ಅನ್ನು ಮಾದರಿ ಬ್ಲಾಕ್ ಅನ್ನಾಗಿ ಎಮ್.ಎಸ್.ಡಬ್ಲ್ಯೂ.2016 ಅನ್ವಯ ಮಾರ್ಪಡಿಸಲು ಅಗತ್ಯ ಕ್ರಮವಹಿಸಲು ತಿಳಿಸಲಾಗಿರುತ್ತದೆ.

ಒಣ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಗೆ ಸಂಬಂದಿಸಿದಂತೆ ಸಂಗ್ರಹಿಸಿರುತ್ತಿರುವ SHC/rack pickers ರವರು ಸದರಿ ವಾರ್ಡ್ ನಲ್ಲಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ ಕಟ್ಟಡವಿಲ್ಲದಿರುವುದರಿಂದ ಸಮರ್ಪಕವಾಗಿ ಒಣ ತ್ಯಾಜ್ಯವನ್ನು ನಿರ್ವಹಿಸಲು ಕಷ್ಟಕರವಾಗಿರುವುದಾಗಿ ಸಭೆಯಲ್ಲಿ ವ್ಯಕ್ತಪಡಿಸಿದ್ದು ಕಳೆದ 9 ತಿಂಗಳಿಂದಲು ಹಲವು ಕೋರಿಕೆಗಳನ್ನು ಸಲ್ಲಿಸಿದ್ದರೂ ಸಹ ಯಾವುದೇ ಕ್ರಮವಹಿಸಿಲ್ಲದಿರುವುದರ ಬಗ್ಗೆ ವ್ಯಕ್ತಪಡಿಸಿರುತ್ತಾರೆ. ಹಾಜರಿದ್ದ ನೋಡಲ್ ಅಧಿಕಾರಿಗಳು, ಜಂಟಿ ಆಯುಕ್ತರು ಘನ ತ್ಯಾಜ್ಯರವರೊಂದಿಗೆ ಚರ್ಚಿಸಲಾಗಿದ್ದು ಸದರಿ ವಾರ್ಡ್ ನಲ್ಲಿ DWCC ಇಲ್ಲದಿರುವುದರಿಂದ ಹಾಗೂ ಸದರಿ ಕಟ್ಟಡಕ್ಕೆ ಸ್ಥಳಾವಕಾಶವು ಲಭ್ಯವಿಲ್ಲದಿರುವುದಾಗಿ ಕಂಡುಬಂದಿರುವುದರಿಂದ ಸೂಕ್ತ ಖಾಸಗಿ ಸ್ಥಳವು ಲಭ್ಯವಿದ್ದಲ್ಲಿ ಬಾಡಿಗೆ ರೂಪದಲ್ಲಿ ಪಡೆಯಲು ಸಕ್ಷಮ ಪ್ರಾಧಿಕಾರಾದ ಅನುಮೋದನೆಯೊಂದಿಗೆ ಕ್ರಮವಹಿಸುವ ಬಗ್ಗೆ ಪರಿಶೀಲಿಸಿ ಮುಂದಿನ ಸಭೆಯಲ್ಲಿ ತಿಳಿಸಲು JHI ರವರಿಗೆ ಸೂಚಿಸಲಾಯಿತು.

**ಕ್ರಮ: ಸ.ಕಾ.ನಿ.ಅ (ಘ.ತ್ಯಾ.ನಿ), ಹಾಗೂ ಶ್ರೀ. ರವಿಕುಮಾರ್ ಮತ್ತು ವಿಜಯ್ ಕಿರಿಯ ಆರೋಗ್ಯ ಪರಿವೀಕ್ಷಕರು**

- ಎಮ್.ಪಿ.ಎಮ್ ಬಡಾವಣೆಯಲ್ಲಿ 3 ಬೀದಿದೀಪಗಳನ್ನು ಅಳವಡಿಸಲು ಕೋರಿರುತ್ತಾರೆ.
- NGEF ಬಡಾವಣೆಯ 11ನೇ ಬ್ಲಾಕ್ ನಲ್ಲಿ 2 ಬೀದಿದೀಪಗಳನ್ನು ಅಳವಡಿಸಲು ಕೋರಿರುತ್ತಾರೆ.

**ಕ್ರಮ: ಸಹಾಯಕ ಅಭಿಯಂತರರು ಶ್ರೀ.ವಿ.ಭರತ್**

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸೂಚಿಸಿರುವ ಸಂಬಂಧ ಪಟ್ಟ ಅಧಿಕಾರಿಗಳು ಅಗತ್ಯ ಕ್ರಮವಹಿಸಿ ಕೈಗೊಂಡ ಕ್ರಮದ ಬಗ್ಗೆ ಸಂಬಂಧಪಟ್ಟವರಿಗೆ ದೂರವಾಣಿ ಮುಖಾಂತರ ಮತ್ತು ಮುಂದಿನ ಸಭೆಯಲ್ಲಿ ತಿಳಿಸಬೇಕೆಂದು ಕೋರುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಹಾಜರಾಗಿರುವುದಿಲ್ಲ)

ಕಾರ್ಯದರ್ಶಿಗಳು ವಾರ್ಡ್ ಸಮಿತಿ

ವಾರ್ಡ್ ಸಂಖ್ಯೆ-129

ನೋಡಲ್ ಅಧಿಕಾರಿಗಳು 18/06

ವಾರ್ಡ್ ಸಂಖ್ಯೆ-129

ಪ್ರತಿಯನ್ನು:-

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲುಕೋರಿದೆ.
2. ಜಂಟಿಆಯುಕ್ತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.